ನನ್ನ ಪರಿಚಯದವರ್‍ಯಾರೂ ಇದ್ದಂತಿಲ್ಲ.' ನಾನು ಕೂತಲ್ಲಿಂದ ಏಳದೆ ಅಲ್ಲೇ ಹಂದಾಡುತ್ತ ತಡವರಿಸಿದೆ. ಅವಳು ನನ್ನನ್ನು ನಂಬಿದಂತೆ ಕಾಣಲಿಲ್ಲ. ಅವಳು ನನ್ನ ಮುಂದೆ ಇದ್ದ ಚೇರ್ ಎಳೆದು ಕುಳಿತುಕೊಂಡವಳೇ, 'ಸರ್! ಯಾಕೆ ಸುಳ್ಳು ಹೇಳ್ತಾ ಇದೀರಿ, ನಂಗೆ ನಿಮ್ಮ ಬಗ್ಗೆ ಬೇಜಾರೇನೂ ಇಲ್ಲ,ಮೊದಲು ಅದನ್ನ ತಿಳ್ಕೊಳ್ಳಿ, ಬಟ್ ಆ ಸಂಬಂಧ ನಂಗೆ ನಿಮ್ಮ ಜೊತೆ ಸ್ವಲ್ಪ ಮಾತಾಡಬೇಕಿದೆ' ಎಂದಳು. ಅವಳು ಕುರ್ಚಿ ಎಳೆದುಕೊಂಡು ಕೂತ ಪರಿಗೆ ಅವಳು ನನ್ನ ಜೊತೆ ಮಾತಾಡದೇ ಇಲ್ಲಿಂದ ಹೊರಡುವವಳಲ್ಲ, ಗಟ್ಟಿ ಹೆಂಗಸು ಅನಿಸಿತು. ಆದರೆ ಯಾರು ಏನೆಂದು ಹಿಂದೆ ಮುಂದೆ ಪರಿಚಯವೇ ಇಲ್ಲದವಳೊಂದಿಗೆ, ತೀರಾ ಪರಿಚಿತರೇನೋ ಎಂಬಂತೆ ಹೇಗೆ ಮಾತಾಡುವುದು? ಅದ್ಯಾವುದದು ಯಾವುದೋ ಸಂಬಂಧ ಅಂದಳಲ್ಲ, ಯಾವ ಸಂಬಂಧದ ಬಗ್ಗೆ ಮಾತಾಡುವುದು? ಅದೂ ಹೀಗೆ ನನ್ನ ಕಂಫರ್ಟ್ ಝೋನಿನಲ್ಲಿ ಇಷ್ಟು ಬೆಳಬೆಳಗ್ಗೆ ಯಾರೊಬ್ಬರೂ ಮನೆಗೆ ಬರಲಾರರೆಂಬ ನಂಬಿಕೆಯಲ್ಲಿ ನಿರಾಳವಾಗಿದ್ದವನ ಬೆಳಗಿನ ಸೊಗಸನ್ನು ಹಾಳುಮಾಡಿದವಳ ಜೊತೆ?

'ಮೇಡಂ,ನೋಡಿ ನಿಮಗೆಲ್ಲೋ ತಪ್ಪು ಗ್ರಹಿಕೆ ಆಗಿದೆ. ಇದರಲ್ಲೇನೂ ತಪ್ಪಿಲ್ಲ. ಹಾಗೆ ಕೆಲವೊಮ್ಮೆ ಅಚಾತುರ್ಯ ಆಗುವುದೇ,ಆದರೆ ನಾನು ನಿಜವನ್ನೇ

